◆ **ಮೌನ?**

ಚಿಕ್ಕಂದಿನಲ್ಲಿ ನನ್ನ ಮೇಲೆ ಅತ್ಯಾಚಾರವಾಯಿತು. ನನ್ನಣ್ಣನಿಗೆ ಆ ಕೃತ್ಯ ಎಸಗಿದ ವ್ಯಕ್ತಿಯ ಹೆಸರನ್ನು ಹೇಳಿದೆ. ಕೆಲವೇ ದಿನಗಳಲ್ಲಿ ಆತನ ಕೊಲೆಯಾಯಿತು. ನನಗಾಗ ಏಳೂವರೆ ವರ್ಷ. ನನ್ನ ಮಾತು ಅವನನ್ನು ಕೊಂದಿತು ಅಂತ ಅನ್ನಿಸಿತು. ಐದು ವರ್ಷಗಳ ಕಾಲ ಮಾತಾಡುವುದನ್ನೇ ನಿಲ್ಲಿಸಿಬಿಟ್ಟೆ. ಇದರ ಬಗ್ಗೆ Caged Birdನಲ್ಲಿ ಬರೆದಿದ್ದೇನೆ.

◆ **ಲೇಖಕಿ ಆಗಬೇಕು ಅಂತ ಯಾವಾಗ ನಿರ್ಧರಿಸಿದಿರಿ? ಇನ್ನು ಮುಂದೆ ಇದನ್ನೇ ಮಾಡಬೇಕು ಅಂತಂದುಕೊಂಡ ಯಾವುದಾದರೂ ಕ್ಷಣ ಇದೆಯಾ?**

ಪಿಬಿಎಸ್‌ನ ಟಿವಿ ಸರಣಿಗಾಗಿ ಬರೆಯಲು ಕ್ಯಾಲಿಫೋರ್ನಿಯಾಗೆ ಹೋಗುವವಳಿದ್ದೆ. ನಾನು ಕವಯಿತ್ರಿ, ನಾಟಕಕಾರ್ತಿ ಅಂದುಕೊಂಡಿದ್ದೆ. ಅದನ್ನೇ ಜೀವನಪೂರ್ತಿ ಮಾಡಬೇಕು ಅಂದುಕೊಂಡಿದ್ದೆ. ಇಲ್ಲವೇ ಎಸ್ಟೇಟ್ ಬ್ರೋಕರ್ ಆಗಿ ಹೆಸರು ಮಾಡಬೇಕೆಂದುಕೊಂಡಿದ್ದೆ. ಜೇಮ್ಸ್ ಬಾಲ್ಡ್‌ವಿನ್ ಒಂದು ಸಲ ಜೂಲ್ಸ್ ಹಾಗೂ ಜೂಡಿ ಫೀಫರ್ ಜೊತೆ ರಾತ್ರಿಯೂಟಕ್ಕೆ ಕರೆದುಕೊಂಡು ಹೋಗಿದ್ದರು. ಮೂವರೂ ಬಹಳ ಒಳ್ಳೆಯ ಮಾತುಗಾರರು. ಅವರು ತಂತಮ್ಮ ಕತೆಗಳನ್ನು ಹೇಳುತ್ತಾ ಹೋದರು. ಮಧ್ಯೆ ನಾನೂ ನನ್ನ ಕತೆ ಹೇಳಿದೆ. ಮಾರನೆಯ ದಿನ ಜೂಡಿ ಫೀಫರ್ ರ್‍ಯಾಂಡಮ್ ಹೌಸ್‌ನ ಸಂಪಾದಕ ಬಾಬ್ ಲೂಮಿಸ್‌ಗೆ ಫೋನ್ ಮಾಡಿ, ನನ್ನ ಕೈಲಿ ಆತ್ಮಕತೆ ಬರೆಸಬಹುದು ಅಂತ ಸಲಹೆ ಕೊಟ್ಟ. ನಂತರ ಲೂಮಿಸ್ ನನಗೆ ಫೋನ್ ಮಾಡಿ ಕೇಳಿದಾಗ ಅಂತಹ ಬರವಣಿಗೆ ನನ್ನಿಂದ ಸಾಧ್ಯವಿಲ್ಲ ಅಂತ ನಿರಾಕರಿಸಿಬಿಟ್ಟೆ. ಕ್ಯಾಲಿಫೋರ್ನಿಯಾಗೆ ಹೋಗಿ ಆಫ್ರಿಕನ್ ಹಾಗೂ ಕಪ್ಪು ಅಮೆರಿಕನ್ ಸಂಸ್ಕೃತಿ ಕುರಿತ ಟಿವಿ ಸರಣಿಯಲ್ಲಿ ತೊಡಗಿಕೊಂಡೆ. ಲೂಮಿಸ್ ಮೂರು ಸಲ ಫೋನ್ ಮಾಡಿದಾಗಲೂ



> ಪ್ರತಿ ಮನುಷ್ಯನೂ ಭೂಮಿಯಲ್ಲಿ ಬೆಳೆಯಲು ಬೆಲೆ ತೆರಲೇಬೇಕಾಗುತ್ತದೆ. ಬಹಳಷ್ಟು ಮಂದಿ ಬೆಳೆಯುವುದೇ ಇಲ್ಲ. ಅದು ಬಹಳ ಕಷ್ಟ. ಬಹಳಷ್ಟು ಮಂದಿ ಮುದಿಯಾಗಿಬಿಡುತ್ತಾರೆ, ಅಷ್ಟೇ. ಇದು ಸತ್ಯ. ಅವರು ತಮ್ಮ ಕ್ರೆಡಿಟ್ ಕಾರ್ಡುಗಳಲ್ಲಿ ಮುಳುಗಿರುತ್ತಾರೆ. ಮದುವೆಯಾಗುತ್ತಾರೆ. ಮಕ್ಕಳನ್ನು ಮಾಡಿಕೊಳ್ಳುತ್ತಾರೆ. ಆದರೆ, ಬೆಳೆಯುವುದಿಲ್ಲ.